ಕೃಷಿ ಮಾರುಕಟ್ಟೆಗಳಿಗೆ ವಿಶೇಷ ಸೌಲಭ್ಯಗಳು

1371 (1756) ಶ್ರೀ ಬಿಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಸುಸಜ್ಜಿತವಾದ ಹುಟ್ಟುವ ಮಾರುಕಟ್ಟೆ ಯಾವುದು; ಅಲ್ಲಿ ಇರುವ ವಿಶೇಷವಾದ ಸೌಲಭ್ಯಗಳ ವಿವರ ಮತ್ತು ಅದರಿಂದ ಯಾವ ಹುಟ್ಟುವಳಿಗಳಿಗೆ ರೈತರು ಲಾಭ ಪಡೆಯುತ್ತಿರುವರು ತಿಳಿಸುವುದು;

ಆ) ಹುಬ್ಬಳ್ಳಿಯ ಶ್ರೀ ಬಸವೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ವಿಶೇಷ ವೈಜ್ಞಾನಿಕ ಸೌಲಭ್ಯಗಳನ್ನು ಅಳವಡಿಸಿ ರಾಷ್ಟ್ರದ ಮಾದರಿಯ ಮಾರುಕಟ್ಟೆ ಮಾಡುವ ಮೂಲಕ ಏಶಿಯಾದಲ್ಲಿಯೇ ಬೃಹತ್ ಮಾರುಕಟ್ಟೆಯಾಗಿ ಮಾಡಲಾಗುವುದೇ;

ಇ) ಹಾಗಿದ್ದಲ್ಲಿ ಯಾವ ಸೌಲಭ್ಯಗಳನ್ನು ಅಳವಡಿಸಲಾಗುವುದು; ವಿವರ ನೀಡುವುದು?

ಶ್ರೀ ಬಿ.ಎಸ್.ಪಾಟೀಲ್ (ಸಾಸನೂರು) (ಕೃಷಿ ಮರುಕಟ್ಟೆ ಸಚಿವರು):

ಅ) ರಾಜ್ಯದಲ್ಲಿ 143 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸ್ಥಾಪಿಸಲಾಗಿದೆ. 117 ಮಾರುಕಟ್ಟೆ ಸಮಿತಿಗಳು ಸ್ವಂತ ಪ್ರಾಂಗಣಗಳನ್ನು ಅಭಿವೃದ್ಧಿ ಪಡಿಸಿ ವ್ಯಾಪಾರ ವಹಿವಾಟಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಆಂತರಿಕ ರಸ್ತೆಗಳು, ಆಂಗಡಿ ಗೋದಾಮಗಳು, ಹರಾಜು ಕಟ್ಟೆ, ನೀರು ಹಾಗೂ ವಿದ್ಯುತ್ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ಶೌಚಾಲಯ ಉಪಹಾರ ಗೃಹ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿರುತ್ತದೆ. ಉಳಿದ ಮಾರುಕಟ್ಟೆ ಪ್ರಾಂಗಣಗಳನ್ನು ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗಿದೆ. ಒಟ್ಟು 113 ಹುಟ್ಟುವಳಿಗಳಿಗೆ ರೈತರು ಲಾಭ ಪಡೆಯುತ್ತಿರುವರು.

ಆ) ಹುಬ್ಬಳ್ಳಿಯನ್ನು ಒಂದು ಉತ್ತಮ ಮಾದರಿ ಮಾರುಕಟ್ಟೆ ಮಾಡಲು ಎಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ಪ್ರಾಂಗಣದಲ್ಲಿ ನಡೆಯುವ ವ್ಯಾಪಾರ ವಹಿವಾಟಿಗೆ ಅನುಗುಣವಾಗಿ ಈಗಾಗಲೇ 11.06 ಕೋಟಿ ವೆಚ್ಚದಲ್ಲಿ ಪ್ರಮುಖ ಹುಟ್ಟುವಳಿಗಳಾದ ಈರುಳ್ಳಿ, ಆಲೂಗೆಡ್ಡೆ, ಒಣಮೆಣಸಿನಕಾಯಿ, ಜೋಳ, ಶೇಂಗಾ, ಇವುಗಳಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಹತ್ತಿ ತಂತ್ರಜ್ಞಾನ ಮಿಷನ್ ಯೋಜನೆಯಲ್ಲಿ ಹತ್ತಿ ಹುಟ್ಟುವಳಿಗಳಿಗಾಗಿ ಪ್ರತ್ಯೇಕವಾದ ಸ್ಥಳಾವಕಾಶದಲ್ಲಿ ಹತ್ತಿ ವರ್ಗೀಕರಣ ಪ್ರಯೋಗಾಲಯ, ಕಾಂಕ್ರೀಟ್ ನೆಲಹಾಸು, ಪಾರ್ಕಿಂಗ್ ಸ್ಥಳ ಇತ್ಯಾದಿ ಸೌಲಭ್ಯಗಳನ್ನು 150.00 ಲಕ್ಷ ರೂ.ಗಳ ವೆಚ್ಚದಲ್ಲಿ ಸಿದಗಿಸಲಾಗಿದೆ. ತರಕಾರಿ ಮಾರಾಟ ಬೆಳೆಗಾರರಿಗೆ ಅನುಕೂಲವಾಗಲು 27.68 ಲಕ್ಷ ರೂ.ವೆಚ್ಚದಲ್ಲಿ ರೈತರ ಸಂತೆ ಪ್ರಾರಂಭಿಸಲು ಕ್ರಮ ಜರುಗಿಸಲಾಗಿದೆ. ಪ್ರಾಂಗಣದ ಎಲ್ಲಾ ವಹಿವಾಟುಗಳನ್ನು ಗಣಕೀಕರಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಪ್ರತಿ ತಾಲ್ಲೂಕುಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ರೈತ ಕೇಂದ್ರಗಳ

1372 (1776) ಶ್ರೀ ಬಿಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?